

'ಬ್ಲಾಕ್ ಫಾರೆಸ್ಟ್' ಕೇಕ್‌ನ ಮೂಲ ಜರ್ಮನಿ. ಜರ್ಮನಿಯ ಬ್ಲಾಕ್ ಫಾರೆಸ್ಟ್ ಪರ್ವತ ಶ್ರೇಣಿಯಲ್ಲಿ ಚೆರ್‍ರಿ ಹಣ್ಣಿನಿಂದ ತಯಾರಿಸುವ ಒಂದು ಬಗೆಯ ಮದ್ಯವನ್ನು ತಯಾರಿಕೆಗೆ ಬಳಸುವುದರಿಂದ ಕೇಕ್‌ಗೆ ಆ ಹೆಸರು ಬಂದಿದೆ. ಈ ಚಾಕೊಲೇಟ್ ಕೇಕ್‌ನ ಪದರಗಳ ನಡುವೆ ಕಡೆದ ಫ್ರೆಶ್ ಕ್ರೀಂ ಮತ್ತು ಚೆರ್‍ರಿ ಹಣ್ಣಿನ ಚೂರುಗಳನ್ನು ಧಾರಾಳವಾಗಿ ಬಳಸುತ್ತಾರೆ.

ಜರ್ಮನಿಯ ಬ್ಲಾಕ್ ಫಾರೆಸ್ಟ್ ದಟ್ಟವಾದ ಅರಣ್ಯ ಪ್ರದೇಶ. ಎತ್ತರೆತ್ತರವಾಗಿ ಒತ್ತೊತ್ತಾಗಿ ಬೆಳೆದ ಮರಗಳು ಸೂರ್ಯನ ಕಿರಣಗಳನ್ನು ಭೂಮಿಗೆ ಬೀಳಲು ಬಿಡುವುದಿಲ್ಲ. ಸದಾ ನೆರಳಿನಿಂದ ಕೂಡಿದ್ದು, ಕಪ್ಪಾಗಿ ಕಾಣುವುದರಿಂದಾಗಿ ಅದಕ್ಕೆ ಈ ಹೆಸರು ಬಂದಿದೆ.

ಜರ್ಮನಿಯ ನೈಋತ್ಯ ಭಾಗದಲ್ಲಿ 200 ಕಿ.ಮೀ ಉದ್ದ ಮತ್ತು 60 ಕಿ.ಮೀ ವಿಸ್ತಾರವಾದ ಪ್ರದೇಶದ ದಟ್ಟ ಅರಣ್ಯವನ್ನು 'ಬ್ಲಾಕ್ ಫಾರೆಸ್ಟ್' ಎನ್ನುವರು. ಕಾಡಿನ ದಕ್ಷಿಣ ಮತ್ತು ಪಶ್ಚಿಮದಲ್ಲಿ ರೈನ್ ನದಿ ಹರಿಯುತ್ತದೆ. ಈ ಪರಿಸರದ 'ಟಿಟ್ಸೆ ಬ್ಲಾಕ್ ಫಾರೆಸ್ಟ್' ಎಂಬ ಪ್ರದೇಶವು ಪ್ರವಾಸಿಗರಿಗೆ ಆಕರ್ಷಕ ತಾಣ.

ಅದೊಂದು ಅರಣ್ಯದ ನಡುವಿನ ವಿಹಾರಧಾಮ. ಸುತ್ತಲಿನ ಪೈನ್ ವೃಕ್ಷಗಳ ಸಾಲು, ಬೃಹತ್ತಾದ ಓಕ್ ಮರಗಳು, ಪರ್ವತಗಳ ವಿಹಂಗಮ ನೋಟ, ಸರೋವರದ ಜುಳುಜುಳು ನಾದ ಅಲ್ಲಿನ ಸೌಂದರ್ಯಕ್ಕೆ ಕಾರಣವಾಗಿವೆ.

ಟಿಟ್ಸೆ ಬ್ಲಾಕ್ ಫಾರೆಸ್ಟ್‌ನ ಮತ್ತೊಂದು ಆಕರ್ಷಣೆ 'ಕುಕೂ ಕ್ಲಾಕ್'ಗಳು. ಅಲ್ಲಿ ಡ್ರಬ್ಬಾ ಎಂಬಲ್ಲಿಗೆ ನಮ್ಮನ್ನು ಕರೆದೊಯ್ದರು. ಗಡಿಯಾರಗಳು ತಯಾರಾಗುವ ಪ್ರದೇಶವದು. ಗಡಿಯಾರದ ಆಕಾರದ ಕಟ್ಟಡವನ್ನೇ ಅಲ್ಲಿ ಮರದಲ್ಲಿ ನಿರ್ಮಿಸಿದ್ದಾರೆ. ಸುತ್ತಮುತ್ತ ಕಾಡು, ಪರ್ವತಸಾಲು, ಒಟ್ಟಾರೆ ಸುಂದರವಾದ ಸ್ಥಳ.

ಗಡಿಯಾರದ ಆಕಾರದ ಆ ಕಟ್ಟಡದಲ್ಲಿ ಗಂಟೆ ಹೊಡೆಯುವ ಸಮಯಕ್ಕೆ ಸರಿಯಾಗಿ ಮೇಲೆ ಮುಚ್ಚಿದ ಬಾಗಿಲಿನೊಳಗಿನಿಂದ ಹಕ್ಕಿಯು ಹೊರಬಂದು ಕೂಗುತ್ತದೆ, ಗಂಡು ಹೆಣ್ಣು ನೃತ್ಯ ಮಾಡುವ ಭಂಗಿಯಲ್ಲಿರುವ ಗೊಂಬೆಗಳು ಒಂದು ಸುತ್ತು ಬರುತ್ತವೆ. ಗಂಟೆ ಹೊಡೆಯುವ ಸಮಯಕ್ಕೆ ಕಾದಿರುವ ಪ್ರವಾಸಿಗರು ತಪ್ಪದೆ ಆ ದೃಶ್ಯವನ್ನು ಕಣ್ತುಂಬಿಕೊಳ್ಳುತ್ತಾರೆ.

ಕಟ್ಟಡದೊಳಗೆ ಹೋದ ನಮಗೆ ಮರದಿಂದ ಮಾಡಲಾದ ವಿವಿಧ ವಿನ್ಯಾಸಗಳ ಗೋಡೆ ಗಡಿಯಾರ(ಕುಕೂ ಕ್ಲಾಕ್)ಗಳು ಕಂಡುಬಂದವು. ಅಲ್ಲಿನ ಕೆಲಸಗಾರನೊಬ್ಬ ನಮ್ಮನ್ನೆಲ್ಲ ಹತ್ತಿರ ಕರೆದು, 'ಕುಕೂ ಕ್ಲಾಕ್'ಗಳು ಬೆಳೆದು ಬಂದ ಬಗೆಯನ್ನು ವಿವರಿಸಿದ. ಗಡಿಯಾರದ ಒಂದೊಂದೇ ಬಿಡಿಭಾಗ ಜೋಡಿಸಿ, ಗಡಿಯಾರ ತಯಾರಿಸಿ ಹಕ್ಕಿಯಿಂದ ಕೋಗಿಲೆ ಹಾಡನ್ನು ಹಾಡಿಸಿ ತೋರಿಸಿದ.

1730ರಲ್ಲಿ ಫ್ರಾಂಜ್ ಆಂಟೋನ್ ಕೆಟರರ್ ಮೊಟ್ಟಮೊದಲು ಕುಕೂ ಕ್ಲಾಕ್ ರೂಪಿಸಿದನಂತೆ. ಪಾರಂಪರಿಕವಾಗಿ ಸಾಗಿಬಂದ ಈ ಗಡಿಯಾರ ತಯಾರಿಕಾ ಕಲೆ ಅಪರೂಪದ್ದು. ಹದಿನೇಳನೇ ಶತಮಾನದಲ್ಲಿ ಆ ಗಡಿಯಾರಗಳ ಉತ್ಪಾದನೆ ಆರಂಭವಾಗಿ ಹದಿನೆಂಟನೇ ಶತಮಾನದ ಮಧ್ಯಭಾಗದಲ್ಲಿ ವಿಶ್ವವನ್ನೇ ಆವರಿಸಿದವು. ಅಂದಿನಿಂದ ಇಂದಿನವರೆಗೆ ಅವುಗಳ ಉತ್ಪಾದನೆ, ಮಾರಾಟ ಹಿಂತಿರುಗಿ ನೋಡಿಲ್ಲ.

ಆ ಕಾಡಿನಲ್ಲಿ ಲಭ್ಯವಿರುವ ಕಟ್ಟಿಗೆಯನ್ನೇ ವಿಶಿಷ್ಟ ರೂಪದಲ್ಲಿ ಬಳಸಿ ಅದನ್ನು ಉದ್ದಿಮೆಯನ್ನಾಗಿಸುವ ಉದ್ದೇಶದಿಂದ ಆ ಗಡಿಯಾರಗಳ ಆವಿಷ್ಕಾರವಾಯಿತು. ಅದೇ ಕಾಡಿನಲ್ಲಿರುವ ಕುಕೂ (ಕೋಗಿಲೆ) ಪಕ್ಷಿಗಳ ಪ್ರತಿರೂಪ ಮತ್ತು ಕೂಗನ್ನು ಗಡಿಯಾರಗಳಲ್ಲಿ ಬಳಸಿಕೊಳ್ಳತೊಡಗಿದ್ದರಿಂದ, ಅವುಗಳಿಗೆ ಆ ಹೆಸರೇ 'ಕುಕೂ ಕ್ಲಾಕ್ಸ್' ರೂಪದಲ್ಲಿ ಬಂತು.

ಅವು ಪೆಂಡ್ಯುಲಮ್ ಗಡಿಯಾರ. ಕೈಯಿಂದಲೇ ತಯಾರಾಗುತ್ತವೆ. ಕಟ್ಟಿಗೆಯಲ್ಲಿ ಅಸಾಧಾರಣ ಕೌಶಲದಿಂದ ಮಾಡಿದ ಕೆತ್ತನೆಯ ಕೆಲಸ, ಗಂಟೆಗೊಮ್ಮೆ ಗೂಡಿನಲ್ಲಿರುವ ಕುಕ್ಕೂ ಪಕ್ಷಿ ಹೊರಬಂದು ಕುಕೂ ಎಂದು ಕೂಗಿ ಮತ್ತೆ ಗೂಡು ಸೇರಿಕೊಳ್ಳುವುದು ಅವುಗಳ ವೈಶಿಷ್ಟ್ಯ. ಅದಕ್ಕಾಗಿಯೇ ವಿಶ್ವವಿಖ್ಯಾತಿ. ಮೊದಮೊದಲು ಕೇವಲ ನಾಲ್ಕಾರು ವಿನ್ಯಾಸಗಳಲ್ಲಿ ತಯಾರಾಗುತ್ತಿದ್ದ ಗಡಿಯಾರಗಳು ಈಗ ಸುಮಾರು ನೂರೈವತ್ತು ವಿನ್ಯಾಸಗಳಲ್ಲಿ ರೂಪುಗೊಳ್ಳುತ್ತಿವೆ. ಇತ್ತೀಚಿಗೆ ತಯಾರಿಕೆಯಲ್ಲಿ ಅಲ್ಪ ಸ್ವಲ್ಪ ಲೋಹವೂ ಬಳಸಲಾಗುತ್ತಿದ್ದು ಮೆರುಗನ್ನು ಇನ್ನೂ ಹೆಚ್ಚಿಸಿವೆ.

ಗಡಿಯಾರದ ಮೇಲಿನ ಭಾಗದಲ್ಲಿನ ಪುಟ್ಟ ಬಾಗಿಲಿನಿಂದ ಪ್ರತಿ ಗಂಟೆಗೊಮ್ಮೆ ಪುಟ್ಟ ಹಕ್ಕಿಯು ಹೊರಬಂದು ತನ್ನ ಮಧುರ ಸ್ವರದಿಂದ ಹಾಡುತ್ತದೆ. ಆ ಸ್ವರ ಬರಲು ಮರದಿಂದ ತಯಾರಿಸಿದ ಕೊಳವೆಗಳು, ಭಾರವಾದ ಎರಡು ಕಟ್ಟಿಗೆ ತುಂಡಿನ ಸಹಾಯದಿಂದ ಚಲನಶಕ್ತಿ ಪಡೆಯುವ ಗಡಿಯಾರ, ಕುಸುರಿ ಕೆತ್ತನೆಯ ಚೌಕಟ್ಟುಗಳು ಅತ್ಯಾಕರ್ಷಕ. ಕುಕ್ಕೂ ಗಡಿಯಾರವನ್ನು ಹೊಂದುವುದು ಅಭಿಮಾನದ ಸಂಕೇತವೆಂದೇ ಭಾವಿಸಲಾಗುತ್ತದೆ.

ನಾವು ಹೋಗಿದ್ದ ಗಡಿಯಾರದ ಆಕಾರದ ಕಟ್ಟಡ ಮೂರು ಅಂತಸ್ತಿನದು. ನೆಲ ಮಹಡಿ ಕಚ್ಚಾ ಸಾಮಗ್ರಿ ಹಾಗೂ ಕಾರ್ಮಿಕರಿಗೆ ಮೀಸಲಾದರೆ, ಎರಡನೇ ಮಹಡಿ ಪ್ರಾತ್ಯಕ್ಷಿಕೆಗೆ ಮೀಸಲು. ಮೇಲಂತಸ್ತನ್ನು ಮಾರಾಟದ ಮಳಿಗೆಯನ್ನಾಗಿಸಲಾಗಿತ್ತು. ಗಾಜಿನಲ್ಲಿ ತಯಾರಾದ ವೈವಿಧ್ಯಮಯ ವಸ್ತುಗಳು, ಪ್ರಾಣಿ ಪಕ್ಷಿಗಳನ್ನು ಸಹ ಒಂದು ಮಳಿಗೆಯಲ್ಲಿ ಮಾರಾಟಕ್ಕೆ ಇಡಲಾಗಿತ್ತು.

ಆ ಪ್ರದೇಶದಲ್ಲಿನ ಕೇಕ್ (ಬ್ಲಾಕ್ ಫಾರೆಸ್ಟ್ ಕೇಕ್) ಹೆಸರುವಾಸಿ. ಅಲ್ಲಿ ಸಾಕಷ್ಟು ಕೇಕ್ ಅಂಗಡಿಗಳಿವೆ. ಕೇಕ್ ಮತ್ತು ವೈನ್ ಬಹು ಜನಪ್ರಿಯ. ನಮಗೆ ಊಟವನ್ನು ಅಲ್ಲಿಯೇ ಕೊಡಿಸಿದ ಟೂರ್ ಮ್ಯಾನೇಜರ್ ಪ್ರೀತಮ್, 'ಕೇಕನ್ನು ಎಷ್ಟು ಬೇಕಾದರೂ ತಿನ್ನಬಹುದು' ಎಂದರು. ಬ್ಲಾಕ್ ಫಾರೆಸ್ಟ್ ಕೇಕ್ ಸವಿದು, ಕೈಯಲ್ಲಿ ಕುಕೂ ಕ್ಲಾಕ್ ಹಿಡಿದು ಬಸ್ ಕಡೆ ಹೊರಟೆವು.

ಈ ಕಿರುಚಿತ್ರ ವೀಕ್ಷಣೆಗೆ https://youtu.be/0V4mxujIyoU ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.